ಸಂಪುಟ ೨, ಸಂಚಿಕೆ ೨, ಸೆಪ್ಟಂಬರ್ ೨೦೨೩ । E-ISSN: 2583-8245
Volume 2, Issue 2, September 2023

# ಕನ್ನಡ ಸಾಹಿತ್ಯ ಮತ್ತು ತಂತ್ರಜ್ಞಾನ ಸಂದರ್ಭ

**ಡಾ. ಪ್ರಹ್ಲಾದ ಕೆ.**
ಸಹಾಯಕ ಪ್ರಾಧ್ಯಾಪಕರು
ಶ್ರೀ ಎಸ್.ಆರ್. ಕಂಠಿ ಕಲಾ, ವಾಣಿಜ್ಯ
ಹಾಗೂ ವಿಜ್ಞಾನ ಮಹಾವಿದ್ಯಾಲಯ, ಮುಧೋಳ.
kprahallada@gmail.com

ಕನ್ನಡ ಸಾಹಿತ್ಯ ಪರಂಪರೆಗೆ ಸುದೀರ್ಘವಾದ ಇತಿಹಾಸವಿದೆ. ಸಾಹಿತ್ಯವು ಮನುಷ್ಯ ಬದುಕಿನ ಪ್ರತಿಸ್ಪಂದನೆಯಾಗಿ, ಸಾರ್ಥಕ ಜೀವನದ ಸಂಕಥನ ರೂಪಕವಾಗಿ, ಭವಿಷ್ಯದ ಭರವಸೆಯ ಭಾವಸ್ಪಂದನವಾಗಿ ಕಾಲದ ಒಟ್ಟಿಗೆ ಬಂದಿರುವ ಬಹುದೊಡ್ಡ ಶಕ್ತಿಯಾಗಿದೆ. ನಾಡಿನ ಕಲೆ, ಸಂಸ್ಕೃತಿ, ಬದುಕನ್ನು ಒಳಗೊಂಡು ಶ್ರೇಷ್ಠ ಸಾಂಸ್ಕೃತಿಕ ಜಗತ್ತನ್ನು ಅಡಕಗೊಳಿಸಿಗೊಂಡಿದೆ. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯ ಪರಂಪರೆಯು ಹಲ್ಮಿಡಿ ಶಾಸನದಿಂದ ಆರಂಭವಾಗಿ ಆದಿಕವಿ ಪಂಪನನ್ನು ಒಳಗೊಂಡು ಇಂದಿನ ಯುವ ತಲೆಮಾರಿನ ಬರಹಗಾರರವರೆಗೂ ವಿಶಿಷ್ಟ ಪರಂಪರೆಯನ್ನು ನಿರ್ಮಿಸಿಕೊಂಡಿದೆ. ಮೊದಲಿನಿಂದಲೂ ವರ್ತಮಾನದ ಮಾನವನ ಬದುಕನ್ನು ಅನಾವರಣಗೊಳಿಸಿದ್ದಲ್ಲದೆ ಕನ್ನಡ ಭಾಷೆ ಹಾಗೂ ಸಾಹಿತ್ಯ ಚರಿತ್ರೆಯನ್ನು ಶ್ರೀಮಂತವಾಗಿಸುವುದರ ಜೊತೆಗೆ ಮಾನವನ ಶ್ರೇಷ್ಠ ಬದುಕಿಗೆ ಬೇಕಾದ ಸಾರ್ವಕಾಲಿಕ ಮೌಲ್ಯಗಳನ್ನು ಪ್ರತಿಪಾದಿಸುತ್ತ ಬಂದಿದೆ. ಕಲ್ಲಿನ ಮೇಲೆ ಕೆತ್ತುವ ಪರಿಪಾಠದಿಂದ ಶುರುವಾಗಿ ಆಧುನಿಕ ಸೌಲಭ್ಯಗಳಾದ ಕಂಪ್ಯೂಟರ್ ಹಾಗೂ ಮೊಬೈಲ್‌ಗಳಲ್ಲಿ ಛಾಪಿಸುವ ಹಂತದವರೆಗೂ ಕನ್ನಡ ಭಾಷೆ, ಬರಹದ ಸ್ವರೂಪದಲ್ಲಿ ಸಾಕಷ್ಟು ಸ್ಥಿತ್ಯಂತರಗಳನ್ನು ಕಂಡುಕೊಳ್ಳುತ್ತ, ಯುಗಧರ್ಮದಲ್ಲಿ ಗಟ್ಟಿಯಾದ ಮೌಲ್ಯಗಳನ್ನು ಪ್ರತಿಪಾದಿಸುವದರ ಮೂಲಕ ತನ್ನ ಇರುವಂತಿಕೆಯನ್ನು ಸ್ಥಾಪಿಸುತ್ತ ಬಂದಿದೆ. ಕನ್ನಡ ಭಾಷೆಯನ್ನು ಅವಸ್ಥಾಬೇಧಗಳಲ್ಲಿ ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಹಾಗೂ ನವಗನ್ನಡಗಳೆಂದು ವಿಭಾಗ ಮಾಡಿದರೂ ಆಯಾ ಕಾಲಘಟ್ಟದಲ್ಲಿ ಸಾಹಿತ್ಯವು ನಿರಂತರವಾಗಿ ಪ್ರವಾಹಿಸಿ ಮಾನವನ ಸಹಜೀವಿಯಾಗಿದ್ದುಕೊಂಡು ಜೀವಿಸುತ್ತಾ ಬಂದಿದೆ. ಸಾಹಿತ್ಯ ಒದಗಿಸುವ ಜ್ಞಾನಭಂಡಾರದಿಂದ ಮಾನವನ ಜೀವನವನ್ನು ಹಸನಾಗಿಸಿ, ಅವನ ಒಳಿತಿಗಾಗಿ ಮೂಲ ಪ್ರೇರಕವಾಗಬಲ್ಲ ಪುರುಷಾರ್ಥಗಳನ್ನು ದರ್ಶಿಸಿ, ಅನುಭವ ಸತ್ಯತೆಗಳನ್ನು ದೃಷ್ಟಾಂತಗಳ ಮೂಲಕ ರಂಜನಿಯವಾಗಿ ತಿಳಿಸಿ, ಆರೋಗ್ಯಯುತ ಬದುಕಿನ ಕಡೆಗೆ ತಿರುಗಿಸುವಲ್ಲಿ ಬಹುದೊಡ್ಡ ಪರಿಣಾಮ ಬೀರಬಲ್ಲವು ಎಂಬುವುದಕ್ಕೆ ಕವಿರಾಜಮಾರ್ಗದ ಕೆಳಗಿನ ಪದ್ಯಗಳು ನಿದರ್ಶನವಾಗಿವೆ.

'ಪಾಪಮಿದು ಪುಣ್ಯಮಿದು ಹಿತ

ರೂಪಮಿದು ಅಹಿತ ಪ್ರಕಾರಮಿದು ಸುಖಮಿದು ದುಃ

ಖೋಪಾತ್ತಮಿದು ಎಂದು ಅರಿಪುಗುಂ

DOI: 10.59176
http://www.kristujayantijournal.com/index.php/KJKSP

ಆ ಪರಮ ಕವಿಪ್ರಧಾನರಾ ಕಾವ್ಯಗಳ್'

'ಅಧಿಕೃತ ಸತ್ಪುರುಷಾರ್ಥ

ಪ್ರಧಾನ ಧರ್ಮಾರ್ಥ ಕಾಮಮೋಕ್ಷಂಗಳ್ ಅವು ಆ

ಬುಧಜನ ವಿವಿಕ್ತ ಕಾವ್ಯ

ಪ್ರಧಾರಿತ ಅರ್ಥಂಗಳ್ ಅಖಿಳ ಭುವನ ಹಿತಂಗಳ್'

ಕವಿಶ್ರೇಷ್ಠರ ಕಾವ್ಯಗಳು ಇದು ಪಾಪ, ಇದು ಪುಣ್ಯ, ಇದು ಹಿತಕರ, ಇದು ಅಹಿತಕರ, ಇದು ಸುಖಕರ, ಇದು ದುಃಖಕರ ಎಂದು ತಿಳಿಸುತ್ತವೆ. ವಿದ್ವಾಂಸರು ವಿವೇಚನೆ ಮಾಡಿರುವಂತೆ ಸಕಲ ಲೋಕಕ್ಕೂ ಹಿತವನ್ನುಂಟುಮಾಡುವ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಮುಖ್ಯ ಪುರುಷಾರ್ಥಗಳು ಕಾವ್ಯಪ್ರಯೋಜನಗಳಲ್ಲಿ ಅಡಕವಾಗಿವೆ ಎಂಬುವುದನ್ನು ಬದುಕಿನಲ್ಲಿ ಮಾನವನಿಗಿರಬೇಕಾದ ಮೌಲ್ಯಗಳ ದರ್ಶನವನ್ನು ಕಾವ್ಯಗಳು ಮಾಡುತ್ತವೆ ಎಂದು ಕವಿರಾಜಮಾರ್ಗಕಾರನು ತಿಳಿಸುತ್ತಾನೆ. ಅಲ್ಲದೆ ಮಾನವನು ಸಹಜವಾಗಿ ಸುಲಭ ಮಾರ್ಗದಲ್ಲಿ ಸುಖಜೀವನ ನಡೆಸಬಯಸುವ ಮನೋವೃತ್ತಿಯನ್ನು ಬೆಳೆಸಿಕೊಳ್ಳುವಲ್ಲಿ ಹಾಗೂ ನೇರ ನಡತೆಯ ಕಡೆಗೆ ಬದುಕನ್ನು ತಿರಿಗಿಸುವಲ್ಲಿ ಅಂದರೆ ಹಾಗೆ ನಡೆದರೆ ಸುಖ ಹೀಗೆ ನಡೆದರೆ ದುಃಖ ಎಂದು ಮೌಲ್ಯಗಳನ್ನು ತಿಳಿಹೇಳುವಲ್ಲಿ ಹಳಗನ್ನಡದ ಪಠ್ಯಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ ಎಂಬುವುದನ್ನು ಸಾಬೀತು ಮಾಡಿದಂತಿದೆ. ಅಷ್ಟೇ ಅಲ್ಲದೆ ನಡುಗನ್ನಡ ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಚನಗಳಲ್ಲಿ ಮಾನವೀಯ ಮೌಲ್ಯಗಳನ್ನು ಕಾಣಬಹುದಾಗಿದೆ.

'ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ, ಮುನಿಯ ಬೇಡ,

ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ,

ಇದಿರ ಹಳಿಯಲುಬೇಡ

ಇದೇ ಅಂತರಂಗಶುದ್ದಿ ಇದೇ ಬಹಿರಂಗಶುದ್ಧಿ

ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ'

ಬಸವಣ್ಣನವರ ಈ ವಚನವು ಸಾರ್ಥಕ ಬದುಕಿನ ಚಿತ್ರಣವನ್ನು ಅನಾವರಣಗೊಳಿಸುತ್ತದೆ. ಮನುಷ್ಯನ ಆಂತರ್ಯವು ಬಾಹ್ಯದಲ್ಲಿ ತೋರುವಂತೆಯೇ ನಿಷ್ಕಲ್ಮಷವಾಗಿರಬೇಕು, ನಡೆನುಡಿ ಒಂದೇ ಆಗಿರಬೇಕು. ಒಳಗೊಂದು ಗುಣವಿಟ್ಟು ಹೊರಗೊಂದು ಗುಣ ತೋರಗೊಟ್ಟರೆ ಅದು ಬದುಕಿನ ದುರಂತಕ್ಕೆ ಸಮನಾಗಿರುವ ಭಾವವಾಗಿ ತೋರುತ್ತದೆ ಎಂಬುದನ್ನು ಇಲ್ಲಿ ಸರಳವಾಗಿ ತಿಳಿಯಪಡಿಸುತ್ತಾರೆ. ವಚನಕಾರರ ಬಹುಪಾಲು ತತ್ತ್ವ ಈ ನೆಲೆಯಲ್ಲಿ ನಿರೂಪಿತಗೊಳ್ಳುತ್ತವೆ. ಪ್ರಾಚೀನ ಸಾಹಿತ್ಯವು ಅನೇಕ ಮತಧರ್ಮೀಯರಿಂದ ಸರ್ವಧರ್ಮ

ಸಮನ್ವಯ ಪ್ರತಿಪೀಡಕರಿಂದ ಸೃಷ್ಟಿಗೊಂಡದ್ದಾಗಿದೆ. ಇಲ್ಲಿ ಬೌದ್ಧ, ಜೈನ, ವೈದಿಕ ಹಾಗೂ ವೀರಶೈವ ಧರ್ಮಗಳು ರಾಜಾಶ್ರಯ ಪಡೆದು ಈ ಧರ್ಮಗಳ ಅಧೀನದಲ್ಲಿ ಕವಿಗಳು ತಮ್ಮ ಕಾವ್ಯಗಳ ಮೂಲಕ ಒಳಿತು ಕೆಡುಕು(ಬದುಕಿನ)ಗಳ ಬಗ್ಗೆ ಚಿಂತನೆಗೈದು ಕೊನೆಯಲ್ಲಿ ಸತ್ಯದರ್ಶನವನ್ನು ಅಭಿವ್ಯಕ್ತಿ ಮಾಡಿರುವುದು ಸೋಜಿಗವೆನಿಸುತ್ತದೆ. ಅಷ್ಟೇ ಅಲ್ಲದೆ ಲೋಕರೂಢಿಗೆ ಅನುಗುಣವಾಗಿ ಲೌಕಿಕ ಶಾಸ್ತ್ರಗ್ರಂಥಗಳಲ್ಲಿ ಮತೀಯ ಮಿತಿಗಳನ್ನು ಮುಕ್ತವಾಗಿಸಿ ಬದುಕಿನ ದಿಗ್ದರ್ಶನವನ್ನು ಮಾಡಿಕೊಟ್ಟಿದ್ದಾರೆ. ಪಂಪ, ರನ್ನ, ನಾಗವರ್ಮ, ಕುಮಾರವ್ಯಾಸ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ, ಪುರಂದರದಾಸ, ಕನಕದಾಸ ಮುಂತಾದವರು ಹೆಣ್ಣು–ಗಂಡು ಎಂಬ ಲಿಂಗಭೇದವನ್ನು ತೋರದೆ ಹಾರವ, ಹೊಲೆಯ, ಕಮ್ಮಾರ, ಬಡಗಿ ಮುಂತಾದ ಜಾತಿಭೇದವನ್ನು ತೊಡೆದು ಹಾಕಿ ಸಮಾಜದ ದೃಷ್ಟಿಯಲ್ಲಿ ಎಲ್ಲರೂ ಸರಿಸಮಾನರು ಎಂಬ ತತ್ವದ ಆಧಾರದ ಮೇಲೆ ಬದುಕಿನ ಕಳಕಳಿಯನ್ನು ನಿರೂಪಿಸಿದ್ದಾರೆ. ಈಗಿನ ಆಧುನಿಕ ಜಗತ್ತಿನಲ್ಲಿ ನಡೆಯುವಂತಹ ಜಾತೀಯತೆ, ಭ್ರಷ್ಟಾಚಾರ, ಅತ್ಯಾಚಾರ, ರೈತರ ಆತ್ಮಹತ್ಯೆ ಕೋಮುವಾದಿತನ, ಉಗ್ರವಾದಿತನಗಳೇ ತಾಂಡವವಾಡುತ್ತಿರುವ ಸನ್ನಿವೇಶದಲ್ಲಿ ಹಳಗನ್ನಡ ಹಾಗೂ ನಡುಗನ್ನಡ ಪಠ್ಯಗಳನ್ನು ಕೈಗೆತ್ತಿಕೊಂಡು ಮಸ್ತಕದಿಂದ ತಿರುವಿ ಹಾಕಬೇಕಾಗಿದೆ. ಇದರ ಮೂಲಕ ಸಮಾಜವನ್ನು ಸರಿದಾರಿಗೆ ತರುವಲ್ಲಿ ಹಿಂದಿನ ಸಾಹಿತ್ಯವನ್ನು ಪ್ರಸ್ತುತಗೊಳಿಸುವ ಅಗತ್ಯತೆಯಿದೆ ಎನ್ನಿಸಿಬಿಡುತ್ತದೆ.

ಪ್ರಾಚೀನ ಸಾಹಿತ್ಯದಲ್ಲಿ ಇವತ್ತಿನ ದೈನಂದಿನ ಬದುಕಿಗೆ ಅನುಕೂಲವಾಗುವಂತಹ ಉಪಯುಕ್ತ ಗ್ರಂಥಗಳೂ ಕೂಡ ರಚನೆಗೊಂಡಿವೆ. ವೈದ್ಯಶಾಸ್ತ್ರ(ಶ್ರೀಧರದೇವನ ವೈದ್ಯಾಮೃತ) ಪಾಕಶಾಸ್ತ್ರ, (3ನೇಮಂಗರಸನ ಸೂಪಶಾಸ್ತ್ರ), ಜ್ಯೋತಿಷ್ಯ,ಶಾಸ್ತ್ರ (ಶ್ರೀಧರಚಾರ್ಯನ ಜಾತಕ ತಿಲಕ), ಕಾಮಶಾಸ್ತ್ರ (ಚಂದ್ರರಾಜನ ಮದನತಿಲಕ) ಅಲ್ಲದೆ ಗಣಿತಶಾಸ್ತ್ರ, ರತ್ನಶಾಸ್ತ್ರ ಮುಂತಾದ ಬಗೆಬಗೆಯ ಶಾಸ್ತ್ರಗ್ರಂಥಗಳು ಇಂದಿಗೂ ನಿತ್ಯ ಜೀವನಕ್ಕೆ ಬೇಕಾಗುವಂತಹ ಮಾಹಿತಿಗಳನ್ನು ಒದಗಿಸುತ್ತವೆ. ದಾಸವಾಙ್ಮಯದ ಸಂದರ್ಭದಲ್ಲಿ ದಾಸರಿಂದ ರೂಢಿಗೆ ಬಂದ ಕೀರ್ತನ ಸಾಹಿತ್ಯದಿಂದ ಲಕ್ಷಣಬದ್ದವಾದ ಸಂಗೀತ ರಚನೆಗೊಂಡು ಸಂಗೀತ ಶಾಸ್ತ್ರಕ್ಕೆ ಸ್ಪಷ್ಟ ಚೌಕಟ್ಟು ಒದಗಿತು.

'ಅದುಣಿಪರಮಾಗಮ ಕೋ

ವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ

ಮೊದಲೊಳ್ ಕಲ್ತಂಗಲ್ಲದೆ

ಪದದೊಳ್ ಜಾಣುಂ ಬೆಡಂಗುಮಕ್ಕುಮೆ ಕೃತಿಯೊಳ್'

ಕನ್ನಡದ ಮೊದಲ ಲಾಕ್ಷಣಕಾರನಾದ ಕವಿರಾಜಮಾರ್ಗಕಾರನು ಹೇಳಿರುವುದರ ಉದ್ದೇಶ ಇಂದು ಸೃಜನಶೀಲ ಬರವಣಿಗೆಯಲ್ಲಿ ತೊಡಗಿಕೊಳ್ಳುವವರಿಗೆ ಸಾಹಿತ್ಯದಲ್ಲಿ ವಿಷಯ ವಸ್ತುವನ್ನು ಯಾವ ರೀತಿ ಆಯ್ಕೆಮಾಡಿಕೊಳ್ಳಬೇಕು? ಅದಕ್ಕೆ ಬಳಸುವ ಭಾಷೆಯ ಶೈಲಿ ಯಾವ ಬಗೆಯಲ್ಲಿ ಇರಬೇಕು? ಆ ಕ್ಷೇತ್ರದಲ್ಲಿ ತನ್ನ ವಿಶಿಷ್ಟತೆಯಿಂದ ಹೇಗೆ ಮೆರೆಯಬಹುದೆಂಬ ಅರಿವು ಮೂಡಲು ಸಾಹಿತ್ಯ ಪರಂಪರೆಯ ಪರಿಚಯ ಇರಬೇಕೆಂದು ಸೂಚಿಸಿದ್ದಾನೆ. ಹೀಗಾಗಿ ಇಂದಿನ ಸೃಜನಶೀಲ ಸಾಹಿತ್ಯದ ಸೃಷ್ಟಿಗೆ ಪೂರಕ ಹಾಗೂ ಪ್ರೇರಕವಾಗಿ ಪ್ರಾಚೀನ ಪಠ್ಯಗಳ ಓದು ಬೇಕಾಗುತ್ತದೆ ಎಂಬುದಕ್ಕೆ ಈ ಪದ್ಯ ಪುಷ್ಟಿ ನೀಡುತ್ತದೆ. ಒಬ್ಬ ಸೃಜನಶೀಲ ಬರಹಗಾರನಿಗೆ ಅಗತ್ಯವಾಗಿ

ಬೇಕಾಗುವುದು ಶಬ್ಧಕೋಶ, ವ್ಯಾಕರಣ, ಛಂದಸ್ಸು, ಅಲಂಕಾರ, ರಸ, ಕಾವ್ಯಲಕ್ಷಣ ಮುಂತಾದ ವಿಷಯಗಳು ಇವೆಲ್ಲವುಗಳನ್ನು ಪ್ರಾಚೀನ ಕವಿಗಳು ಕಾವ್ಯ ಪಂಡಿತರು ತಮ್ಮ ಕೃತಿಗಳ ಜೊತೆ ಜೊತೆಗೆ ತಮ್ಮ ಕಾವ್ಯದಲ್ಲಿ ಒಂದು ಭಾಗವಾಗಿ ಪ್ರಸ್ತಾಪಿಸುವುದರ ಮೂಲಕ ಕಾವ್ಯ ಕಟ್ಟುವ ಬಗೆಯನ್ನು ಹಾಗೂ ಸೃಜನಶೀಲತೆಯ ನೆಲೆಯನ್ನು ತಿಳಿಸುತ್ತಾರೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಕಾಲದಿಂದ ಕಾಲಕ್ಕೆ ಹಲವು ಸಾಹಿತ್ಯ ರೂಪಗಳು ರೂಪಗೊಂಡಿವೆ. ಪೂರ್ವದ ಹಳಗನ್ನಡ ಹಾಗೂ ಹಳಗನ್ನಡ ಕಾಲಘಟ್ಟದಲ್ಲಿ ಚಂಪೂ ಶೈಲಿಯಲ್ಲಿ ಕಾವ್ಯಗಳು ರಚನೆಗೊಂಡರೆ, ನಡುಗನ್ನಡದಲ್ಲಿ ವಚನಸಾಹಿತ್ಯವು ಮೊದಲುಗೊಂಡು ತ್ರಿಪದಿ, ಷಟ್ಪದಿ, ಕೀರ್ತನೆ, ಸಾಂಗತ್ಯಗಳಲ್ಲಿ ಸಾಹಿತ್ಯವು ಸೃಷ್ಟಿಯಾಯಿತು. ಇಲ್ಲಿ ಚಂಪೂ ಶೈಲಿಯಲ್ಲಿದ್ದ ಭಾಷಾಪ್ರೌಢಿಮೆ, ಛಂದದ ಬಿಗಿತ ಸಡಿಲಗೊಂಡು ಸರಳ ಶೈಲಿಯನ್ನು ರೂಢಿಸಿಕೊಳ್ಳುತ್ತ ಬಂದಿತು. ಪಂಪಯುಗದ ಕಾಲದಲ್ಲಿ ಲೌಕಿಕ ಮತ್ತು ಆಗಮಿಕ ಸ್ವರೂಪದಂತಹ ಕಾವ್ಯ ಬೆಳವಣಿಗೆಗೆ ಅಂದಿನ ಕವಿಗಳು ತಾವು ನಂಬಿರುವಂತಹ ಧರ್ಮಗಳ ಮೇಲೆ ಇಟ್ಟಿರುವ ಅಭಿಮಾನ, ಶ್ರದ್ಧೆಯ ಮೌಲ್ಯವೇ ಮೂಲ ಪ್ರೇರಣೆಯಾಗಿದೆ. ಜೊತೆಗೆ ಕವಿಯು ತನ್ನ ಆಶ್ರಯದಾತನ ಧರ್ಮ ಪ್ರಚಾರಕ್ಕೆ ಕಾವ್ಯವನ್ನು ಒಂದು ಮಾರ್ಗವಾಗಿ ಮಾಡಿಕೊಂಡಿರಬಹುದು. ಆಗಮಿಕ-ಲೌಕಿಕ ಎಂಬ ಕಾವ್ಯಮಾರ್ಗಗಳ ನಿರ್ಮಾಣವು ಪಂಪನ ಪೂರ್ವಕವಿಗಳಿಂದಲೇ ಪ್ರಾರಂಭವಾಗಿತ್ತು. ಗುಣವರ್ಮ ಕವಿಯ 'ಹರಿವಂಶ' ಮತ್ತು 'ಶೂದ್ರಕ'ಗಳೆಂಬ ಎರಡು ಕಾವ್ಯಗಳು ಆಗಮಿಕ ಮತ್ತು ಲೌಕಿಕ ಮಾರ್ಗವನ್ನು ಸೂಕ್ಷ್ಮವಾಗಿ ತೋರಿಸಿಕೊಟ್ಟಂತಿದೆ. ನಂತರದಲ್ಲಿ ಬಂದ ಪಂಪ ಮಹಾಕವಿ "ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ" ಎಂದು ಹೇಳುವುದರ ಮೂಲಕ ಕಾವ್ಯದ ಎರಡು ಮಾರ್ಗಗಳನ್ನು ಸೂಕ್ಷ್ಮವಾಗಿ ತೋರಿಸಿರುವನು. ಅದರ ಅನ್ವಯದಿಂದಲೇ ಆದಿಪುರಾಣವನ್ನು ಆಗಮಿಕ ಕಾವ್ಯವಾಗಿ ವಿಕ್ರಮಾರ್ಜುನ ವಿಜಯವನ್ನು ಲೌಕಿಕ ಸ್ವರೂಪದಲ್ಲಿ ಕಾವ್ಯ ರಚನೆ ಮಾಡಿದ್ದಾನೆ. ಈತನ ಮಾರ್ಗವನ್ನೇ ಅನುಸರಿಸಿ ರನ್ನ ಸಾಹಸಭೀಮ ವಿಜಯಂ(ಲೌಕಿಕ), ಅಜಿತನಾಥ ಪುರಾಣಂ(ಆಗಮಿಕ). ಪೊನ್ನ ಭುವನೈಕ ರಾಮಾಭ್ಯುದಯ(ಲೌಕಿಕ), ಶಾಂತಿಪುರಾಣ(ಆಗಮಿಕ). ನಾಗಚಂದ್ರ ಪಂಪರಾಮಾಯಣ(ಲೌಕಿಕ) ಮಲ್ಲಿನಾಥ ಪುರಾಣ(ಆಗಮಿಕ) ಇನ್ನು ಮುಂತಾದ ಕವಿಗಳು ಆಗಮಿಕ, ಹಾಗೂ ಲೌಕಿಕ ಕಾವ್ಯಗಳೆಂದು ರಚನೆ ಮಾಡಿದ್ದಾರೆ. ಒಂದು ಧಾರ್ಮಿಕ ಕಾವ್ಯ ಇನ್ನೊಂದು ಲೌಕಿಕ ಕಾವ್ಯವನ್ನು ಬರೆಯುವ ಪದ್ಧತಿಯು ಪಂಪಯುಗದವರೆಗೆ ನಡೆದು ಬಂದಿತು.

ಅನಂತರದಲ್ಲಿ ಅಂದರೆ ನಡುಗನ್ನಡ ಕಾಲಘಟ್ಟದಲ್ಲಿ ಈ ಕ್ರಮವು ಕಾಣಸಿಗುವುದಿಲ್ಲ. ಅಲ್ಲದೇ ಧಾರ್ಮಿಕ ಕಾವ್ಯವನ್ನು ತಮ್ಮ ಕವಿಗಳಿಂದ ಪ್ರತ್ಯೇಕವಾಗಿ ರಚಿಸಿರುವುದು ಜೈನ ಧರ್ಮದಲ್ಲಿ ಮಾತ್ರವಾಗಿದೆ. ಜೈನಧರ್ಮದಲ್ಲಿನ ಧೋರಣೆಗಳನ್ನು, ಮಹಾಪುರುಷರನ್ನು, ಮೋಕ್ಷಸಾಧನೆಗಳನ್ನು, ಪುರಾಣ-ಪುಣ್ಯಕಥೆಗಳನ್ನು ಕವಿಗಳ ಕಾವ್ಯಗಳಲ್ಲಿ ಬರೆಸುವುದರ ಮೂಲಕ ಆಗಿನ ಸಮಾಜದಲ್ಲಿ ಜೈನಧರ್ಮದ ಪ್ರಚಾರಕ್ಕೆ ಅನುವುಮಾಡಿಕೊಳ್ಳುವಲ್ಲಿ ಸಾಹಿತ್ಯ ಒಂದು ಪ್ರಮುಖ ಸಾಧನವಾಯಿತು. ಅಂತೆಯೇ ಅಂದಿನ ರಾಜಪ್ರಭುತ್ವದ ಸಂದರ್ಭದಲ್ಲಿ ತಮ್ಮ ರಾಜಪ್ರತಿಷ್ಠೆಯ ಪ್ರತೀಕವಾಗಿ ಕವಿಗಳಿಗೆ ಆಶ್ರಯ ನೀಡಿ ತಮ್ಮ ಯಶೋಗಾಮಿತನವನ್ನು ಲೌಕಿಕ ಕಾವ್ಯಗಳಲ್ಲಿ ಪ್ರತಿಬಿಂಬಿಸುತ್ತಿದ್ದರು. ಪಂಪಯುಗದುದ್ದುಕ್ಕೂ ಈ ಕಾರ್ಯವನ್ನು ಕಾಣಬಹುದು. ಮುಂದೆ ವೀರಶೈವ ಧರ್ಮ ಹಾಗೂ ವೈಷ್ಣವ(ಬ್ರಾಹ್ಮಣ) ಧರ್ಮ ಪ್ರಾಬಲ್ಯಕ್ಕೆ ಬಂದಾಗಲೂ ವೀರಶೈವ ಧರ್ಮವು ಶಿವನಿಗೆ ಸಂಬಂಧಿಸಿದ ಕತೆಗಳನ್ನು ಹೇಳಿದರೆ, ವೈಷ್ಣವರು ವಿಷ್ಣುವಿನ ಸುತ್ತಿ ಪುರಾಣಗಳನ್ನು ಹೇಳಿದರು. ಇಲ್ಲಿ ತಮ್ಮ ಧರ್ಮ ಪ್ರಚಾರದ ಹಾಗೂ ಪ್ರಸಾರದ ಕ್ರಿಯೆಯು

ನಡೆದಿತ್ತಾದರೂ ಜೈನಧರ್ಮದಲ್ಲಿದ್ದಂತೆ ಪ್ರತ್ಯೇಕವಾದ ಲೌಕಿಕ, ಆಗಮಿಕ ಕಾವ್ಯಗಳಂತೆ ರಚನೆಗೊಳ್ಳಲಿಲ್ಲ. ಇಲ್ಲಿ ಆ ಎರಡು ಧೋರಣೆಗಳು ಏಕವಾಗಿ ಒಂದೇ ನೆಲೆಗಟ್ಟಿನಲ್ಲಿ ಸಾಹಿತ್ಯ ಸೃಷ್ಟಿಯಾಯಿತು. ಈ ಲಕ್ಷಣವು ಸಾಹಿತ್ಯದ ಬದಲಾವಣೆಯ ಸೂಚಕವಾಗಿರಬಹುದು. ಜೈನಧರ್ಮ, ವೀರಶೈವಧರ್ಮ ಹಾಗೂ ವೈಷ್ಣವಧರ್ಮಗಳು ತಮ್ಮ ಉತ್ಕೃಷ್ಟತೆಯ ಕಾಲಘಟ್ಟದಲ್ಲಿ ತಮ್ಮ ಧರ್ಮ ಪ್ರಚಾರದ ನಿಟ್ಟಿನೊಳಗೆ ಸಾಹಿತ್ಯ ಹುಲುಸಾಗಿ ರಚನೆಗೊಂಡಿತು. ಜೈನಧರ್ಮದ ಕಾಲದಲ್ಲಿ ಬೆಳೆದು ಬಂದ ಲೌಕಿಕ ಮತ್ತು ಆಗಮಿಕ ಕೃತಿಗಳನ್ನು ಗಮನಿಸಿದಾಗ ವಿಷಯಗಳು ಸಮೀಕರಣಗೊಂಡಿರುವುದು ಕಾಣಬಹುದು. ಇದಕ್ಕೆ ಇಂಬುಕೊಡುವಂತೆ ಲೌಕಿಕ ಕಾವ್ಯಗಳಲ್ಲಿ ದೇವತಾ ಸ್ತುತಿಗಳ ಮೂಲಕ ಪ್ರಾರಂಭಗೊಳ್ಳುತ್ತವೆ. ಅಂದರೆ ಲೌಕಿಕ ಕಾವ್ಯಗಳಲ್ಲಿಯೂ ಧರ್ಮಕ್ಕೆ ಸಂಬಂಧಿಸಿದಂತೆ ಎಷ್ಟೋ ಅಂಶಗಳು ಪ್ರಸ್ತಾಪಗೊಳ್ಳುವುದುಂಟು. ಹೀಗಾಗಿ ಎರಡೂ ಕಾವ್ಯಗಳಲ್ಲಿ ಕೂಡ ಧಾರ್ಮಿಕ, ಲೌಕಿಕವೂ ಸಮೀಕರಣಗೊಂಡಿರುವುದನ್ನು ಗಮನಿಸಬಹುದು. ಜೈನಧರ್ಮದ ಸಾಹಿತ್ಯವು ಪಂಡಿತ ಮಾನ್ಯರಲ್ಲಿಯೇ ಉಳಿದು ಅಭಿವ್ಯಕ್ತಿಗೊಂಡರೆ, ವೀರಶೈವ ಧರ್ಮವು ಪ್ರಾಬಲ್ಯಕ್ಕೆ ಬಂದಾಗ ಸಾಹಿತ್ಯವು ಸಮಾಜದೆಡೆಗೆ ಮುಖಮಾಡಿತ್ತು. ಈ ಪರಿಣಾಮದಿಂದ ಸಾಹಿತ್ಯವಲಯದಲ್ಲಿ ದೊಡ್ಡ ಬದಲಾವಣೆ ಬರುವುದಕ್ಕೆ ಸಾಧ್ಯವಾಯಿತು. ವೀರಶೈವ ಧರ್ಮ ಸಾಹಿತ್ಯದಲ್ಲಿ ಧರ್ಮವೇ(ಆಗಮಿಕ) ಸಾಹಿತ್ಯವಾಗಿ(ಸಮಾಜ) ಲೌಕಿಕ ಮುಖಿಯಾಯಿತು. ಇಲ್ಲಿ ಸಮಾಜ ಮತ್ತು ಧರ್ಮವು ಸಾಹಿತ್ಯದೊಳಗೆ ಐಕ್ಯವಾಗಿರುವಂತೆ ಕಂಡು ಬಂದಿತು.

ನಂತರದಲ್ಲಿನ ಹೊಸಗನ್ನಡ ಸಾಹಿತ್ಯವು ವಿವಿಧ ಬಗೆಯಲ್ಲಿ ರೂಪಗೊಂಡು ಶೈಲಿಯಲ್ಲಿ ಹೊಸತನವನ್ನು ಕಂಡುಕೊಂಡಿತು. ಭಾವಗೀತೆ, ಕಾದಂಬರಿ, ಕಥೆ, ಪ್ರಬಂಧ, ಜೀವನ ಚರಿತ್ರೆ, ನಾಟಕ, ಮಹಾಕಾವ್ಯ, ಆತ್ಮಕಥನ, ಪ್ರವಾಸ ಸಾಹಿತ್ಯ, ಮಕ್ಕಳ ಸಾಹಿತ್ಯ, ಚುಟುಕು ಸಾಹಿತ್ಯ ಹೀಗೆ ಹಲವು ಪ್ರಕಾರಗಳಲ್ಲಿ ಸಾಹಿತ್ಯ ಹುಲುಸಾಗಿ ಬೆಳೆಯಿತು. ಹೊಸಗನ್ನಡ ಕಾಲದಲ್ಲಿ ಸಾಹಿತ್ಯವು ಸರ್ವರಲ್ಲಿ, ಸರ್ವದರಲ್ಲಿ ವ್ಯಾಪಿಸಿ ಒಂದು ಚಳುವಳಿಯಾಗಿ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯಗಳೆಂಬ ಸಾಹಿತ್ಯದ ಪ್ರಕಾರಗಳು ರೂಪಗೊಂಡವು. ಮನುಷ್ಯನ ಬದುಕು ಬದಲಾದಂತೆ ಸಾಹಿತ್ಯ ಕೂಡ ತನ್ನ ಸ್ವರೂಪದಲ್ಲಿ, ಅಭಿವ್ಯಕ್ತಿಯಲ್ಲಿ ಬೇರೆ ಬೇರೆ ರೂಪ ಪಡೆದುಕೊಳ್ಳುತ್ತದೆ. ಒಂದು ಕಾಲವು ಮೆರೆಸಿದಂತಹ ಜೀವನ ಮೌಲ್ಯಗಳನ್ನು ಇನ್ನೊಂದು ಕಾಲವು ತಿರಸ್ಕರಿಸಿ ಹೊಸ ಮೌಲ್ಯಗಳ ಹುಟ್ಟಿಗೆ ಕಾರಣವಾಗಬಹುದು. ಬದುಕಿನ ಪ್ರತಿಬಿಂಬದಂತಿರುವ ಸಾಹಿತ್ಯವು ಅಂದಿನ ಯುಗಧರ್ಮವನ್ನೇ ಅನುಸರಿಸುತ್ತದೆ. ಅದಕ್ಕಾಗಿ ಸಾಹಿತ್ಯವು ನಿತ್ಯ ಪರಿವರ್ತನಾಶೀಲ ಗುಣ ಹೊಂದಿದೆಯೆಂದು ಹೇಳಲಾಗುತ್ತದೆ. ಸುದೀರ್ಘ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯವನ್ನು ಪರಾಮರ್ಶಿಸಿದಾಗ ಈ ಅಂಶ ಅನುಭವವೇಧ್ಯವಾಗುತ್ತದೆ. ಪಂಪಯುಗದ ಕನ್ನಡ ಸಾಹಿತ್ಯದ ವೈಶಿಷ್ಟ್ಯಗಳಲ್ಲಿ ಲೌಕಿಕ ಮತ್ತು ಆಗಮಿಕ ಕಾವ್ಯಗಳು ರಚನೆಗೊಂಡಿರುವುದುಂಟು. ಲೌಕಿಕ ಕಾವ್ಯದಲ್ಲಿ ಕವಿಯು ತನ್ನ ಆಶ್ರಯದಾತ, ರಾಜನ ಜೀವನ ಚಿತ್ರಗಳು, ಸಮಕಾಲೀನ ಸಾಮಾಜಿಕ ಹಾಗೂ ರಾಜಕೀಯ ಸನ್ನಿವೇಶಗಳನ್ನು ಕಾವ್ಯದಲ್ಲಿ ನಿರೂಪಿತಗೊಳಿಸಿದರೆ ಆಗಮಿಕ ಕಾವ್ಯದಲ್ಲಿ ಕವಿಯು ಹಾಗೂ ಆಶ್ರಯದಾತನ ಮತ ಧರ್ಮಗಳಲ್ಲಿನ ಮಹಾವ್ಯಕ್ತಿ, ತತ್ವಗಳ ಮೌಲ್ಯಗಳನ್ನು ಚಿತ್ರಿತಗೊಳಿಸಿದ್ದಾರೆ. ಹಳಗನ್ನಡ ಕವಿಗಳ ಈ ಕಾವ್ಯ ರಚನೆಯ ವೈಶಿಷ್ಟತೆಯು ಹೊಸಗನ್ನಡ ಸಾಹಿತ್ಯದಲ್ಲಿ ಎಲ್ಲಿಯೂ ಕಾಣ ಸಿಗುವುದಿಲ್ಲ. ಇಲ್ಲಿನ ಕವಿಗಳ ಹಿಂದಿನ ಕವಿಗಳಂತೆ ಯಾವ ಮತ–ಧರ್ಮಗಳ ಪರವಾಗಿ ಸಾಹಿತ್ಯ ರಚನೆ ಮಾಡಿರುವುದಿಲ್ಲ. ಹೊಸಗನ್ನಡ ಸಾಹಿತ್ಯವು ಸಾರ್ವತ್ರಿಕವಾದುದಾಗಿದ್ದು ಸಾಹಿತ್ಯದ ಹುಡುಕಾಟ, ಪ್ರಕೃತಿಯ ಆರಾಧನೆ, ಬದುಕಿನ ಹಂಬಲ, ವಾಸ್ತವಿಕ ನೆಲೆಗಳ ಹುಡುಕಾಟ, ವಿಶ್ವಶಾಂತಿ, ಭ್ರಾತೃತ್ವ ಹೀಗೆ ನಾನಾ ರೀತಿಯ ಮೌಲ್ಯಗಳ ಶೋಧನೆಯಲ್ಲಿ ಸಾಹಿತ್ಯವು

ನೆಲೆನಿಂತಿದೆ. ಇದಕ್ಕೆ ಮುಖ್ಯ ಕಾರಣ ಮೊದಲಿಗೆ ಹೇಳಿದ ಹಾಗೆ ಸಾಹಿತ್ಯವು ನಿತ್ಯ ಪರಿವರ್ತನಾಶೀಲತೆಯನ್ನು ಕಂಡುಕೊಂಡಿರುವುದಾಗಿದೆ.

## ತಂತ್ರಜ್ಞಾನ ಸಂದರ್ಭದಲ್ಲಿ ಕನ್ನಡ ಅಧ್ಯಯನ ಹಾಗೂ ಅಧ್ಯಾಪನದ ಸವಾಲು

ಆಧುನಿಕ ಜಗತ್ತಿನಲ್ಲಿ ಅಧ್ಯಯನ, ಅಧ್ಯಾಪನ ಹಾಗೂ ಕಲಿಕೆ ಔಪಚಾರಿಕವಾಗಿ ನೀಡುತ್ತಿರುವ ವ್ಯವಸ್ಥೆಯಾಗಿದೆ. 1986ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಕಾರ ಒಂದು ಹಂತದವರೆಗೆ ಎಲ್ಲಾ ವಿದ್ಯಾರ್ಥಿಗಳಿಗೆ ಜಾತಿ, ಮತ, ಪಂಥ, ಸ್ಥಳ ಅಥವಾ ಲಿಂಗ ತಾರತಮ್ಯವಿಲ್ಲದೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂಬ ಸಂದೇಶದ ಪ್ರಕಾರವಾಗಿ ನಮ್ಮಲ್ಲಿ ಬಹುತೇಕ ಇಲ್ಲಿಯವರೆಗೂ ಶಿಕ್ಷಣ ವ್ಯವಸ್ಥೆಯಲ್ಲಿ ಸೇವೆಗೈಯುತ್ತಿರುವ ಶಿಕ್ಷಕರು ಆತ್ಮಾವಲೋಕನ ಮಾಡಿಕೊಂಡಾಗ ಕೆಲವೊಂದು ಪ್ರಶ್ನೆಗಳು ಉದ್ಭವ ಆಗುತ್ತವೆ. ಶಿಕ್ಷಕರು ನಿಜವಾಗಿಯೂ ನಮ್ಮ ದೇಶಕ್ಕೆ ಉತ್ತಮ ಪ್ರಜೆಗಳನ್ನು ನೀಡುತ್ತಿದ್ದಾರಾ? ಒಂದು ವೇಳೆ ಇಲ್ಲಾ ಎಂದಾದರೆ ಅದಕ್ಕೆ ಶಿಕ್ಷಕರೇ ನೇರ ಕಾರಣವೆ? ಹಿಂದೆ ಇದ್ದಂತಹ ಶಿಕ್ಷಕ ಮತ್ತು ವಿದ್ಯಾರ್ಥಿಗಳ ಮಧ್ಯೆ ಇರುವಂಥ ಅವಿನಾಭಾವ ಸಂಬಂಧ ಇಂದು ಇದೆಯೇ?. ಇಂದು ವ್ಯವಸ್ಥೆಗಳು ವಿದ್ಯಾರ್ಥಿ–ಶಿಕ್ಷಣ–ಶಿಕ್ಷಕರ ಅಭಿವೃದ್ಧಿ ಹೆಸರಿನಲ್ಲಿ ಮುಖ್ಯವಾಗಿ ಆಗಬೇಕಿದ್ದ "ಬೋಧನೆ ಮತ್ತು ಕಲಿಕೆ"ಗೆ ಮುಕ್ತ ಅವಕಾಶವನ್ನು ನೀಡುತ್ತಿವೆಯೇ? ಮೌಲ್ಯಾಧಾರಿತ ಶಿಕ್ಷಕರ ಕೊರತೆ ಇದೆಯೇ? ಇನ್ನು ಮುಂತಾದ ಅನೇಕ ಪ್ರಶ್ನೆಗಳ ಜೊತೆ ಇಂದಿನ ಶಿಕ್ಷಕರು ತಮ್ಮ ವೃತ್ತಿಯನ್ನು ಅನುಭವಿಸುತ್ತಿದ್ದಾರೆ. ಶಿಕ್ಷಕರು ಇಂದು ಕೇವಲ ಓದು–ಬರಹ–ಬೋಧನೆಗೆ ಅಷ್ಟೇ ಸೀಮಿತಕ್ಕೊಳಗಾಗಬೇಕಾದವರು. ಬೋಧನೇತರ ಚಟುವಟಿಕೆಗಳಲ್ಲಿಯೇ ಇಂದು ಹೆಚ್ಚು ಸಮಯವನ್ನು ಕಳೆಯುತ್ತಿದ್ದಾರೆ. ಪೂರ್ಣಕಾಲೀಕ ಅರೆಕಾಲೀಕ ಎಂಬ ಹಣೆಪಟ್ಟಿಗಳನ್ನೊತ್ತು ಒತ್ತಡಗಳ ಮಧ್ಯೆ ಕೆಲಸವನ್ನು ನಿಭಾಯಿಸುವ ಶಿಕ್ಷಕರು ಇಂದು ಸಂಕಷ್ಟ ಹಾಗೂ ಸವಾಲುಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ.

ಶಿಕ್ಷಣ ವ್ಯವಸ್ಥೆಯು ಇಂತಹ ವಿಷಮ ವಾತಾವರಣದಲ್ಲಿರುವಾಗಲೇ ಕೋವಿಡ್–19 ಪರಿಣಾಮವಾಗಿ ಶಿಕ್ಷಕರು ಹೊಸದೊಂದು ಮನ್ವಂತರಕ್ಕೆ ತೆರೆದುಕೊಳ್ಳಬೇಕಾದ ಅನಿವಾರ್ಯತೆ ಆಯಿತು. ಅದುವೇ ಆನ್ಲೈನ್ ಬೋಧನೆ. ಅಂದರೆ ತಂತ್ರಜ್ಞಾನದ ಮೂಲಕ ಬೋಧನೆ ಮತ್ತು ಕಲಿಕೆ ಪ್ರಕ್ರಿಯೆ. ಕೋವಿಡ್ ಬರುವುದಕ್ಕೂ ಒಂದು ವರ್ಷದ ಹಿಂದೆ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯಿಂದ ಒಂದು ಆದೇಶ ಹೊರಡಿಸಿತು. "ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಇನ್ನು ಮುಂದೆ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಬಳಸುವಂತಿಲ್ಲ. ಒಂದು ವೇಳೆ ನಿಯಮ ಉಲ್ಲಂಘಿಸಿ ಯಾರಾದರೂ ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಬಳಸಿದರೆ ಅಂಥವರಿಗೆ ಕಠಿಣ ಶಿಕ್ಷೆ ಹಾಗೂ ಮೊಬೈಲ್ ಹಾಗೂ ಲ್ಯಾಪ್‌ಟಾಪ್ ಜಪ್ತಿ ಮಾಡಲಾಗುತ್ತದೆ". ಇಂಥದೊಂದು ಕಠಿಣ ನಿಯಮ ಜಾರಿ ಮಾಡಿತ್ತು. ನಂತರ ಈಗ ಇದೇ ರಾಜ್ಯ ಸರ್ಕಾರ ಕೋವಿಡ್–19 ಸಾಂಕ್ರಾಮಿಕ ರೋಗ ಪ್ರಸರಣದ ಪರಿಣಾಮವಾಗಿ ಪ್ರೊ ಎಂ.ಕೆ. ಶ್ರೀಧರ್, ಗುರುರಾಜ ಕರ್ಜಗಿ ಅವರಂತಹ ಹಿರಿಯ ಶಿಕ್ಷಣ ತಜ್ಞರ ನೇತೃತ್ವದಲ್ಲಿ ಸಮಿತಿ ತಯಾರಿಸಿದ ವರದಿಯಂತೆ ಶಾಲಾ ಕಾಲೇಜುಗಳಲ್ಲಿ ಆನ್‌ಲೈನ್ ಶಿಕ್ಷಣವನ್ನು (ತಂತ್ರಜ್ಞಾನ ಬೋಧನೆ ಮತ್ತು ಕಲಿಕೆ) ನೀಡಲು ಆದೇಶ ಹೊರಡಿಸಿತ್ತು. ಇದರ ಹಿಂದಿರುವ ಉದ್ದೇಶ ವಿದ್ಯಾರ್ಥಿಗಳಿಗೆ ಬಾಕಿ ಇರುವ ಪಠ್ಯಕ್ರಮ ಮುಗಿಸಬೇಕು, ಪರೀಕ್ಷೆ ನಡೆಸಿ, ಮೌಲ್ಯ ಮಾಪನ ಮಾಡಿ ಫಲಿತಾಂಶ ಘೋಷಣೆ ಆಗಬೇಕು. ಈ ಎಲ್ಲಾ ಕಾರ್ಯಕ್ಕೆ ಪರ್ಯಾಯ ಮಾರ್ಗಗಳ ಅನ್ವೇಷಣೆಯಲ್ಲಿದ್ದಾಗ ತಕ್ಷಣಕ್ಕೆ ಕಂಡು ಬಂದ ಮಾರ್ಗವೆಂದರೆ ಅದು ಆನ್‌ಲೈನ್ ತರಗತಿಗಳು. ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಣ ಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯಗಳು ಹಾಗೂ ಸರ್ಕಾರವು ತಪ್ಪು ಸರಿಗಳ ಚಿಂತನೆ ಮಾಡದೇ ತಮ್ಮ ಅಸ್ತಿತ್ವಕ್ಕಾಗಿ ಶರವೇಗದಲ್ಲಿ ಆನ್‌ಲೈನ್ ತರಗತಿಗಳನ್ನು ಆರಂಭಿಸಿ ಆನ್‌ಲೈನ್

ಬೋಧನೆ ಮಾಡುವ ಸಂಪೂರ್ಣ ಜವಾಬ್ದಾರಿಯನ್ನು ಶಿಕ್ಷಕರ ಮೇಲೆ ಹೊರಿಸಲಾಯಿತು. ಈ ಕುರಿತು ಇದುವರೆಗೂ ಆನ್‌ಲೈನ್ ಶಿಕ್ಷಣದ ಸ್ವರೂಪ ಮತ್ತು ಬೋಧನಾ ವಿಧಾನಗಳ ಕುರಿತು ಶಿಕ್ಷಕರಿಗೆ ತರಬೇತಿಯನ್ನಾಗಲಿ, ಮಾರ್ಗಸೂಚಿಯನ್ನಾಗಲಿ ನೀಡದೇ, ಶಿಕ್ಷಕರು ಮೊಬೈಲ್ ಮತ್ತು ಕಂಪ್ಯೂಟರ್ ಬಳಸಿ ಆನ್‌ಲೈನ್ ತರಗತಿಯ ಬೋಧನೆ ಮಾಡಲು ಅತೀ ಜರೂರಾಗಿ ಸಿದ್ಧರಾಗಿರಬೇಕಾಯಿತು.

ತರಗತಿಗಳಲ್ಲಿ ಪಾಠ ನಿರ್ವಹಣೆ, ಆನ್‌ಲೈನ್ ತರಗತಿಯಲ್ಲಿ ಆಗುತ್ತಿಲ್ಲ. ಯಾರೋ ಸಹಾಯದಿಂದ ಶಿಕ್ಷಕರು ಆನ್‌ಲೈನ್ ತರಗತಿಯಲ್ಲಿ ತೊಡಗಿಸಿದರೆ ತರಗತಿ ನಿರ್ವಹಿಸುವಲ್ಲಿ ಸವಾಲುಗಳು ಎದುರಾಗುತ್ತವೆ. ತರಗತಿಯ ಕೊಠಡಿಯಲ್ಲಿ ಇಡೀ ತರಗತಿ ಶಿಕ್ಷಕರ ಹಿಡಿತದಲ್ಲಿರುತ್ತದೆ. ಪರಸ್ಪರ ಕ್ರಿಯೆ ಪ್ರತಿಕ್ರಿಯೆಗಳು, ವಿಶ್ಲೇಷಣೆ, ಚರ್ಚೆ ಪ್ರಕ್ರಿಯೆಗಳಿಂದ ತರಗತಿ ನಡೆದಿರುತ್ತದೆ. ಆದರೆ ಆನ್‌ಲೈನ್ ತರಗತಿಯಲ್ಲಿ ವಿದ್ಯಾರ್ಥಿಗಳ ಗಮನ ಕೇಂದ್ರೀಕರಿಸುವುದಾಗಲೀ, ಅವನ ಆಲಿಸುವಿಕೆ, ಕಲಿಕೆಯಾಗುವ ಪ್ರಗತಿಯನ್ನು ಗುರುತಿಸುವಲ್ಲಿ ವಿಫಲತೆಯನ್ನು ಶಿಕ್ಷಕರು ಅನುಭವಿಸುತ್ತಾರೆ. ಇದು ಶಿಕ್ಷಕರ ಅತೃಪ್ತಿಗೆ ಕಾರಣವಾಗಿದೆ. ಆನ್‌ಲೈನ್ ಕಲಿಕೆಗೆ ವಿದ್ಯಾರ್ಥಿಗಳ ಆಸಕ್ತಿಯ ಕೊರತೆ ಎದ್ದು ಕಾಣುತ್ತಿರುವುದು ಕಂಡುಬಂದಿರುವುದು ಸತ್ಯ. ಏಕೆಂದರೆ ಅಲ್ಲಿಯವರೆಗೂ ವಿದ್ಯಾರ್ಥಿಗಳು ಮೊಬೈಲ್‌ಗಳನ್ನು ಕೇವಲ ಮನರಂಜನೆಗೋಸ್ಕರವಾಗಿ ಬಳಸುತ್ತಿದ್ದರು. ಈಗ ಝೂಮ್ ಆಪ್‌ಗಳಂತೆ ತರಗತಿ ಕೋಣೆಗಳಿಗೆ ಸೇರಿಕೊಂಡು 40 ನಿಮಿಷ ಪಾಠ ಕೇಳಲು ವಿದ್ಯಾರ್ಥಿಗಳ ಮನಸ್ಸು ಕೇಳುತ್ತಿಲ್ಲ. ಜೊತೆಗೆ ಶಾಲೆ ಕಾಲೇಜುಗಳಲ್ಲಿ ಸ್ನೇಹ, ವಿಶ್ವಾಸ, ಗೌರವಗಳಿಂದ ವಂಚಿತರಾಗಿ ಅನಾಥ ಪ್ರಜ್ಞೆ ಭಾವದಲ್ಲಿ ನೆಪಮಾತ್ರಕ್ಕೆ ಬೋಧನೆ ಮತ್ತು ಕಲಿಕೆ ನಡೆಸಿದಂತಾಗುತ್ತದೆ. ಒಂದು ಮನೋವೈಜ್ಞಾನಿಕ ವಿಶ್ಲೇಷಣೆಯ ಪ್ರಕಾರ ಎಲೆಕ್ಟ್ರಾನಿಕ್ ವಸ್ತುಗಳು ಪ್ರಚೋದನೆಯನ್ನು ನೀಡುತ್ತವೆ ಆದರೆ ಅವು ಮೆದುಳಿನ ಮೇಲೆ ವ್ಯತಿರಿಕ್ತವಾದ ಪರಿಣಾಮ ಬೀರುತ್ತವೆ. ಅವು ಕಲಿಕೆಯಲ್ಲಿ ಅವಧಾನವನ್ನು ಕೇಂದ್ರೀಕರಿಸಲು ಸಾಧ್ಯವಿಲ್ಲ.

**ತಂತ್ರಜ್ಞಾನ ಸಂದರ್ಭ ಹಾಗೂ ಕನ್ನಡ ಸಾಹಿತ್ಯ**

ಆಧುನಿಕ ಜಗತ್ತಿನಲ್ಲಿ ನಮ್ಮ ದೈನಂದಿನ ಬದುಕು ಯಂತ್ರ, ತಂತ್ರಜ್ಞಾನಗಳ ಜೊತೆಗೆ ರೆಕ್ಕೆ ಕಟ್ಟಿಕೊಂಡು ಹಾರುತ್ತಿದೆ. ಸುಧಾರಿತ ತಂತ್ರಜ್ಞಾನದಿಂದಾಗಿ ಸಾಮಾಜಿಕ ಜಾಲತಾಣಗಳು ಫೋನ್, ಇಮೇಲ್, ಐಪ್ಯಾಡ್, ಫೇಸ್‌ಬುಕ್, ವಾಟ್ಸಾಪ್‌ಗಳಂತಹ ಸಂವಹನ ವೇದಿಕೆಗಳು ಇಂದು ಮುಖ್ಯವಾಹಿನಿಯಲ್ಲಿವೆ. ಇಲ್ಲಿ ನಮ್ಮ ಯುವಸಮುದಾಯ ಹೊಸ ಸಂಪರ್ಕ, ಸಂವಹನ, ಸಂಬಂಧಗಳ ಹುಡುಕಿಕೊಳ್ಳುವಿಕೆಯಲ್ಲಿ ನಿರತರಾದ ಕಾರಣ ನಿತ್ಯ ಜೀವನದ ಸ್ವರೂಪ ಬದಲಾಗುತ್ತಿದೆ. ಇಂದು ನವೀನವಾಗಿ ಕಾಣುತ್ತಿರುವ ವಿಷಯ ನಾಳೆಗೆ ಹಳೆಯದಾಗಿ ಕಾಣುವಂತಹ ತಾಂತ್ರಿಕ ಧಾವಂತ ಇಂದಿನದು. ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನವು ನಮ್ಮನ್ನು ಭ್ರಮಾಧೀನಗೊಳಿಸುತ್ತಿದೆ. ಮಾಹಿತಿಯೇ ಜ್ಞಾನವಾಗುತ್ತಿದೆ ಆ ಜ್ಞಾನವೇ ಇಂದು ಸಾಹಿತ್ಯದ ಒಂದು ಮಜಲಾಗಿ ಬೆಳೆಯುತ್ತಿದೆ ಎನ್ನುವಂತಾಗಿದೆ. ಇಂತಹ ಸುಲಭೋಪಾಯ ಹಾಗೂ ತ್ವರಿತಗತಿಯ ತಂತ್ರಜ್ಞಾನದ ಬದುಕಿನಲ್ಲಿ ಮಾನವೀಯ ಮೌಲ್ಯಗಳ ಹುಡುಕಾಟಕ್ಕೆ ಹೆಣಗಬೇಕಾದ ಪರಿಸ್ಥಿತಿಯಿದೆ. ಇಂತಹ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಪ್ರಸ್ತುತತೆ ಅಗತ್ಯವೆನಿಸುತ್ತಿದೆ. ವಿಫುಲತೆಗಳಿಂದ ಕೂಡಿದ ಆಧುನಿಕತೆಯ ಬದುಕಿನಲ್ಲಿ ಕದಲಿದ ಮೌಲ್ಯಗಳ ಮಾನ ಉಳಿಸಿಕೊಳ್ಳಲು ಸಾಹಿತ್ಯದ ಮನನ, ಮಂಥನ ಮಾಡುವ ಅನಿವಾರ್ಯತೆಯಿದೆ. ಯುಗಧರ್ಮದಲ್ಲಿ ನಿಂತುಕೊಂಡು ತಮ್ಮ ಹಿಂದಿನ ಸಾಹಿತ್ಯ ಪರಂಪರೆಯು ತೋರಿದ ಪ್ರತಿಕ್ರಿಯೆಗಳನ್ನು ಅವಲೋಕಿಸಿ ತನ್ಮೂಲಕ ಹೊಸ ಬದುಕನ್ನೂ, ಸೃಜನಾತ್ಮಕ ನೆಲೆಗಳನ್ನೂ ಕಂಡುಕೊಳ್ಳಬೇಕಿದೆ. "ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ, ನಿಂದಣ

ಹೆಜ್ಜೆಯನರಿಯಬಾರದು" ಎಂಬ ಅಲ್ಲಮಪ್ರಭುವಿನ ವಚನವು ಸಾಹಿತ್ಯ ಪರಂಪರೆಯ ಪ್ರಸ್ತುತತೆ ಕುರಿತಾಗಿ ಧ್ವನಿಸುತ್ತದೆ.

ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಪರಂಪರೆಯು ಆಯಾ ಕಾಲದಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಧೋರಣೆಗಳನ್ನು ಕಟ್ಟಿಕೊಡುವುದರ ಮೂಲಕ ಮಾನವನ ವಿಕಾರ ಗುಣಗಳನ್ನು ಬೇರೆ ಬೇರೆ ವಿಧಗಳಲ್ಲಿ ತಿದ್ದಲು ಪ್ರಯತ್ನಿಸುತ್ತದೆ. ಮನುಷ್ಯನ ಮನಸ್ಸಿನಲ್ಲಿ ರಸೋತ್ಪಾದನೆಯನ್ನು ಉಂಟುಮಾಡಿ, ಬುದ್ದಿಯನ್ನು ಒರೆಗೆಹಚ್ಚಿ. ವ್ಯಕ್ತಿಯ ವಿಕಾಸಕ್ಕೆ, ಸಾಮಾಜಿಕ ಜೀವನಕ್ಕೆ ಭದ್ರವಾದ ನೆಲೆಗಟ್ಟನ್ನು, ಆತ್ಮವಿಶ್ವಾಸವನ್ನು ತುಂಬಲು ಪ್ರಯತ್ನಿಸುತ್ತದೆ. ಭಾಷೆಯು ವಿರೂಪಗೊಳ್ಳುತ್ತಿರುವ, ಜೀವನಮೌಲ್ಯಗಳು ಕುಸಿಯುತ್ತಿರುವ, ಸಂಸ್ಕೃತಿಯ ಸೊಗಡು ಕಳೆಗುಂದುತ್ತಿರುವ ಇಂತಹ ದೈನಂದಿನ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಅಧ್ಯಯನ, ಅಧ್ಯಾಪನ ಹಾಗೂ ಸೃಜನಶೀಲ ವ್ಯಕ್ತಿತ್ವ ಒಂದು ಸುಂದರ ಬದುಕನ್ನು ಕಟ್ಟಿಕೊಳ್ಳಲಿಕ್ಕೆ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿಗೆ ಪೂರಕವಾಗುವಂತಹ ವಾತಾವರಣದ ನಿರ್ಮಾಣಕ್ಕೆ ಒಂದು ಸುಭದ್ರ ಅಡಿಪಾಯನ್ನು ರೂಪಿಸಬಲ್ಲದು.

**ಆಧಾರ ಗ್ರಂಥಗಳು**

1) ಸಮಗ್ರ ಗದ್ಯ–3; ಜಿ. ಎಸ್. ಶಿವರುದ್ರಪ್ಪ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; 2009
2) ಶಾಸ್ತ್ರ ಸಾಹಿತ್ಯ; ಎಂ.ವಿ. ಸೀತಾರಾಮಯ್ಯ–3; ಸಪ್ನ ಬುಕ್‌ಹೌಸ್, ಗಾಂಧೀ ಬಜಾರ್, ಬೆಂಗಳೂರು; 2009
3) ಕನ್ನಡದ ಬಾವುಟ; ಬಿ.ಎಂ.ಶ್ರೀ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು; 2010
4) ಸಾಹಿತ್ಯ ಸಂಗಾತಿ; ಕೀರ್ತಿನಾಥ ಕುರ್ತಕೋಟಿ; ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ; 1995
5) ಕನ್ನಡ ಕೈಪಿಡಿ (ಸಂಪುಟ–2); ಸಂ.ಕೆ.ವಿ.ಪುಟ್ಟಪ್ಪ; ಪ್ರಸಾರಂಗ, ಮಾನಸ ಗಂಗೋತ್ರಿ, ಮೈಸೂರು; 2010
6) ಕನ್ನಡ ಕಾವ್ಯ ಸಂಚಯ; ರಂ.ಶ್ರೀ.ಮುಗಳಿ; ಸಾಹಿತ್ಯ ಅಕಾಡೆಮಿ, ನವನಗರ; 1996
7) ಕನ್ನಡ ಸಾಹಿತ್ಯ ಚರಿತ್ರೆಯ ಘಟ್ಟಗಳು; ಡಾ.ಎಸ್ ಎಂ. ಹಿರೇಮಠ, ವಿದ್ಯಾನಿಧಿ ಪ್ರಕಾಶನ, ಗದಗ; 1993
8) ಚಂಪೂ ಕವಿಗಳು; ಪಿ.ವಿ. ನಾರಾಯಣ; ಸ್ವಪ್ನಬುಕ್‌ಹೌಸ್, ಗಾಂಧಿನಗರ, ಬೆಂಗಳೂರು; 2010
9) ಕನ್ನಡ ಸಾಹಿತ್ಯ ಕೋಶ: ರಾಜಪ್ಪ ದಳವಾಯಿ; ದಳವಾಯಿ ಪ್ರಕಾಶನ, ಬೆಂಗಳೂರು ವಿ.ವಿ.ಬೆಂಗಳೂರು; 2018
10) ಭಾಷಾ ತಂತ್ರಜ್ಞಾನ; ಸಂ.ಡಾ.ಸಾಂಬಮೂರ್ತಿ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ; 2009
11) ಶರಣ ಚರಿತಾಮೃತ; ಡಾ.ಸಿದ್ಧಯ್ಯ ಪುರಾಣಿಕ; ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು; 2013